# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** : 1537

**ಸದಸ್ಯರ ಹೆಸರು** : ಶ್ರೀ ಕೆ.ಎಸ್.ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

**ಉತ್ತರಿಸುವವರು** : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು

**ಉತ್ತರಿಸಬೇಕಾದ ದಿನಾಂಕ** : 21.03.2025

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಅಂಗನವಾಡಿಗಳಿಗೆ ಆಹಾರ ಪೂರೈಕೆ ಮಾಡಲು ಚಿತ್ರದುರ್ಗ ಜಿಲ್ಲೆಯಲ್ಲಿ ಉತ್ಪಾದನಾ ಘಟಕವನ್ನು ಯಾವಾಗ ತೆರೆಯಲಾಗಿತ್ತು; | ಅಂಗನವಾಡಿ ಕೇಂದ್ರಗಳಿಗೆ ಆಹಾರ ಪೂರೈಕೆ ಮಾಡಲು ಚಿತ್ರದುರ್ಗ ಜಿಲ್ಲಾ ವ್ಯಾಪ್ತಿಯಲ್ಲಿ 05 ಮಹಿಳಾ ಪೂರಕ ಪೌಷ್ಟಿಕ ಆಹಾರ ಉತ್ಪಾದನಾ ಘಟಕಗಳನ್ನು (ಎಂ.ಎಸ್.ಪಿ.ಸಿ) 2008-09 ನೇ ಸಾಲಿನಿಂದ ಪ್ರಾರಂಭಿಸಲಾಯಿತು. ಇಲ್ಲಿಯವರೆಗೂ ಮಹಿಳಾ ಪೂರಕ ಪೌಷ್ಟಿಕ ಆಹಾರ ಉತ್ಪಾದನಾ ಘಟಕಗಳಿಂದಲೇ ಅಂಗನವಾಡಿ ಕೇಂದ್ರಗಳಿಗೆ ಪೂರಕ ಪೌಷ್ಟಿಕ ಆಹಾರವನ್ನು ಪೂರೈಸಲಾಗುತ್ತಿದ್ದು, ಚಿತ್ರದುರ್ಗ ಜಿಲ್ಲೆಯಲ್ಲಿರುವ ಯಾವುದೇ ಮಹಿಳಾ ಪೂರಕ ಪೌಷ್ಟಿಕ ಆಹಾರ ಉತ್ಪಾದನಾ ಘಟಕಗಳನ್ನು ಸ್ಥಗಿತಗೊಳಿಸಿರುವುದಿಲ್ಲ. |
| ಆ) | ಈ ಘಟಕವನ್ನು ಸರ್ಕಾರ ಸ್ಥಗಿತಗೊಳಿಸಿದೆಯೇ ಅಥವಾ ಮುಂದುವರೆಸುತ್ತಿದೆಯೇ; ಸ್ಥಗಿತಗೊಳಿಸಿದ್ದರೇ ಕಾರಣವನ್ನು ಒದಗಿಸುವುದು; (ವಿವರ ಒದಗಿಸುವುದು) | |
| ಇ) | ಆಹಾರ ಉತ್ಪನ್ನಗಳನ್ನು ಈಗ ಸರ್ಕಾರ ಹೊರರಾಜ್ಯದಿಂದ ಖರೀದಿ ಮಾಡುತ್ತಿದೆಯೇ; ಮಾಡುತ್ತಿದ್ದರೆ, ಯಾವ ಯಾವ ಉತ್ಪನ್ನಗಳನ್ನು ಯಾವ ಯಾವ ಬೆಲೆಗೆ ಮಾಡಲಾಗುತ್ತಿದೆ? (ಪ್ರತಿಯೊಂದು ಉತ್ಪನ್ನಗಳ ಬೆಲೆಯ ವಿವರ ನೀಡುವುದು) | ಮಾನ್ಯ ಸರ್ವೋಚ್ಚ ನ್ಯಾಯಾಲಯದ ದಿನಾಂಕ: 07-10-2004ರ ಆದೇಶದ ಸೂಚನೆಯಂತೆ, 2008ರಿಂದ ಇಲ್ಲಿಯವರೆಗೆ ಸರ್ಕಾರದ ವತಿಯಿಂದಲೇ ಸ್ಥಾಪಿಸಲಾದ 137 ಮಹಿಳಾ ಪೂರಕ ಪೌಷ್ಟಿಕ ಆಹಾರ ಉತ್ಪಾದನಾ ಕೇಂದ್ರಗಳ (ಎಂ.ಎಸ್.ಪಿ.ಸಿ.) ಮೂಲಕ ರಾಜ್ಯದ ಅಂಗನವಾಡಿ ಕೇಂದ್ರಗಳಲ್ಲಿನ ಫಲಾನುಭವಿಗಳಿಗೆ ಪೂರಕ ಪೌಷ್ಟಿಕ ಆಹಾರವನ್ನು ಸರಬರಾಜು ಮಾಡಲಾಗುತ್ತಿದೆ.<br><br>ಪೂರಕ ಪೌಷ್ಟಿಕ ಆಹಾರ ತಯಾರಿಕೆಗೆ ಅಗತ್ಯವಿರುವ ಅಕ್ಕಿ ಮತ್ತು ಗೋಧಿಯನ್ನು ಭಾರತೀಯ ಆಹಾರ ನಿಗಮದಿಂದ, ಎಣ್ಣೆಯನ್ನು ಕೆ.ಓ.ಎಫ್‌ನಿಂದ, ಹಾಗೂ ಹಾಲಿನ ಪುಡಿಯನ್ನು ಕೆ.ಎಂ.ಎಫ್‌ನಿಂದ ಖರೀದಿಸಲಾಗುತ್ತದೆ.<br><br>ಉಳಿದ ಕಚ್ಚಾ ಆಹಾರ ಪದಾರ್ಥಗಳಾದ ಕಡಲೆಬೇಳೆ, ತೊಗರಿಬೇಳೆ, ಸಕ್ಕರೆ, ಬೆಲ್ಲ, ಉಪ್ಪು, ರಾಗಿ, ಸೋಯಾ ಹಿಟ್ಟು, ಹೆಸರುಕಾಳು, ಒಣ ಮೆಣಸಿನಕಾಯಿ, ಸಾಸಿವೆ, ಅರಿಶಿನ, ಉದ್ದಿನಬೇಳೆ ಮತ್ತು ಸಾಂಬಾರ್ ಮಸಾಲಾಗಳನ್ನು ಮಹಿಳಾ ಪೂರಕ ಪೌಷ್ಟಿಕ ಆಹಾರ ಉತ್ಪಾದನಾ ಕೇಂದ್ರಗಳು (ಎಂ.ಎಸ್.ಪಿ.ಸಿ.) ತಮ್ಮ ಹಂತದಲ್ಲಿಯೇ ಸ್ಥಳೀಯವಾಗಿ ಖರೀದಿಸಿ, ಸಂಸ್ಕರಿಸಿ, ಪ್ಯಾಕ್ ಮಾಡಿ ಅಂಗನವಾಡಿ ಕೇಂದ್ರಗಳಿಗೆ ಪೂರೈಸುತ್ತಿದ್ದು, ಆಹಾರ ಉತ್ಪನ್ನಗಳನ್ನು ಹೊರ ರಾಜ್ಯದಿಂದ ಖರೀದಿಸಿತ್ತಿರುವುದಿಲ್ಲ. |

**ಸಂಖ್ಯೆ: ಮಮಇ 98 ಐಸಿಡಿ 2025**

**(ಲಕ್ಷ್ಮೀ ಆರ್. ಹೆಬ್ಬಾಳಕರ್)**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಸಚಿವರು